ಕಲ್ಪನೆ ಕಾವ್ಯ



# ಬಸವಾ ಸೌಖ್ಯವೇ?

ಏನ್ ಬಾಸ್ ಸೌಖ್ಯವೆ?
ಗುಂಡುಕಲ್ಲಿಗೆ ನಂದಿ ರೂಪ...
ಎದುರಿಗೊಬ್ಬ ಹಗ್ಗ ಬಿಚ್ಚಿದ ಗೆಳೆಯ...

ಮಾತಿಗಿಳಿದರೂ ಇಬ್ಬರೂ
ಮೌನವೇ ಮಾತಲ್ಲಿ...

ಪುರಾಣ ಪಾರಾಯಣಗಳ
ಕಲಗಚ್ಚು ಕುಡಿ ಕುಡಿದು
ಗಡದ್ದು ಕೂತಿದ್ದವನಿಗೆ ತುಂಬು ಸೋಜಿಗ
ಜೀವದ ಗೆಳೆಯ ಬಂದದ್ದು...
ಏನ್ ಬಾಸ್ ಸೌಖ್ಯವೆ?

ಇಬ್ಬರ ಹೃದಯಕ್ಕೂ ಬಾಯಿ ಬಂತೀಗ...

ನಿನ್ಗೆ ತಾನೇ ಜಾತ್ರೆಗಂತ
ಮೈಯ ತೊಳೆದು, ಎಣ್ಣೆ ಪೂಸಿ
ಪತ್ರೆ, ಹೂವು, ಕಾಯಿ... ಜೊತೆಗೆ
ಎಡೆಯ ಭೂರಿ ಭೋಜನ
ನೀವೇನ್ ತಿಂದ್ರಿ ಬಾಸ್?

ಕುದ್ದು ಕುದ್ದು ಉಕ್ಕಿ ಸುರಿಯತೊಡಗಿ
ಮೌನ.... ಗೆಳೆಯನೀಗ ತೋಡಿಕೊಂಡ
ದಿಗಿಲು ಬಡಿದ ಪದಗಳಲ್ಲಿ...

ನನ್ನ ಒಡೆಯನೀಗ ದೊಡ್ಡ ರೈತನಲ್ಲ
ಭಾರೀ ಸಾಲಗಾರ
ಅವನ ಗೂಡಿನೆದೆಯ
ತಿವಿ ತಿವಿದು ಬಗೆದುಹಾಕಿದೆ
ಬ್ಯಾಂಕಿನವರ ನೋಟೀಸು...

ನಿನ್ನೆ ಸಂಜೆ ತುಂಬಾ ಹಸಿವು
ತಿಂದುಬಿಟ್ಟೆ ಅವನ ಎಲ್ಲ ಸಾಲಪತ್ರ
ಸುಳಿವೇ ಸಿಗದು ಬ್ಯಾಂಕಿಗೆ...
ನೀಗಬಹುದೆ ಅವನ ಬವಣೆ?

ಇಬ್ಬರೂ ಗೆಳೆಯರು
ಮೌನದಲೇ ಮಾತಾದರು
ಕಲ್ಲು ಮರುಗುವ ಸಮಯ...

● ಕೆ.ಎಲ್. ಶ್ರೀವತ್ಸ

# ಬಿಳಿ ಎತ್ತಿನ ಸ್ವಗತ

ಥೇಟ್ ನನ್ನಂತೆ ಇದೆ
ಕೊರಳಿಗೆ ಹಗ್ಗ ಮಾತ್ರ ಕಟ್ಟಿಲ್ಲ
ಬಿಸಿಲಿಗೂ ಕಣ್ಣೀರಿಳಿಸುವುದಿಲ್ಲ
ಮೈಮೇಲೆರಿದ ನೋಣಗಳಿಗೂ
ಬಾಲಬಿಚ್ಚಿ ಜಾಡಿಸುವುದಿಲ್ಲ!

ಬಿರುಸು ತೊಗಲಿಲ್ಲ
ಮೈತುಂಬ ಕಲ್ಲು ಮಚ್ಚೆಗಳು
ಹುಲ್ಲಿರದೆ ಕಲ್ಲುತಿಂದಿರಬೇಕು!

ಯಾಕಿಷ್ಟು ಸೊಟ್ಟಗಿದೆ
ನನ್ನಷ್ಟು ಡೊಳ್ಳು ಹೊಟ್ಟೆಯು ಇಲ್ಲ

ಮಾಲೀಕನ ಏಟಿಗೆ
ಮುದುರಿಕೊಂಡಿರಬಹುದು!
ಎಷ್ಟೂರ ಮಧ್ಯೆ ಬಂಡಿಗೆ
ಹೆಗಲಾಗಿದೆಯೋ?
ಕತ್ತು ಸವೆದಿದೆ!

ಹೆಂಡಿಯು ಹಿಡಿಲಾರದು
ಪಾಪ ಕಲ್ಲು ಕರಗಿರಲಿಕ್ಕಿಲ್ಲ!
ವಿಭೂತಿ ಪಟ್ಟೆಗಳೆಳೆದ ಕೈಗಳೆ
ಇದರ ಮಾಲೀಕನಿರಬಹುದೆ?

● ಕಪಿಲ ಪಿ. ಹುಮನಾಬಾದೆ